Regd No M 1299 34 th Year ತಾ। 22—1—51

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಗೋವಾ ಸತ್ಯಾಗ್ರಹ ಮುಂದಕ್ಕೆ ಹೋಯಿತು

ಜ| ಅಹಮದ ಖಾನ್ ಸಾಹೇಬ್, ಗೋವಾದಲ್ಲಿ ತಾ|| 26 ರಿಂದ ನಡೆ ಅಧ್ಯಕ್ಷರಾಗಿಯೂ, ಶ್ರೀ ಜಿ. ಎ ಸೂ ಸಲ. ನಿರ್ಧರವಾಗಿದ್ದದ್ದು ಈಗ ಮುಂ ರ್ ನಾರಾಯಣ ಶೆಟ್ಟರು ಉಪಾಧ್ಯಕ್ಷರಾ ದುವರಿಸಲು ತೀರ್ಮಾನಿಸಲಾಗಿದೆ

ಬರೋಡದ ದ್ಪಣಕ್ಕೆ ಕಡಿದ್ನೆದು ವೈಲಿನಾಚೆಯ ಕರ್ಜನ ನಗರದ ಸಂಶ್ಥ ಮುತ್ತ ನಿಸೆ ಸಂಜೆ ಎಂಡು ವೈಲಿದ್ದ ಎದ್ದ ವಿಡಚಿಗಳ ದಂಡು. ಬೀಡಾರ ಬಿಟ್ಟು ಶೇಕಡ 5 ರಷ್ಟು ಬೆಳೆಯನು ನಾಶ ಮಾಡಿದೆಯೆಂದು ತಿಳಿದುಬಂಧ್ತದೆ

ಕೆಲವು ಚೀನಿ ಸೇನಿಕರು ಕೊರಿಯ ಪ ಮರ ಭೂವಿ ಯಿಂದು ಮಂಚೂರಿಯ ಕ ಡೆ ಸಾಗುತ್ತಿರುವುದಾಗಿ ವಾರ್ತೆ

ಇಂಡೋನೇಷಿಯಾದಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದಿರುವ ಪಾರಿಭಾಷಿಕ ಸಹಾಯ ನಿಯೋಗದ ನಾಯಕತ್ವವನ್ನು ಪ್ರೊ. ವಿ. ಕೃ. ಗೋಕಾಕರವರು ಅಂಗೀಕರಿಸಿರುವರೆಂದು ಗೊತ್ತಾಗಿದೆ

ಕಾಶಿಯ ಜವಾಹರಿ ಅಂಗಡಿಗೆ ಬಂದ ಟ್ರಂಕಿನಿಂದ ಹದಿನೈದು ಸಾವಿರ ರೂ ಪಾಕೀಸ್ತಾನ ನೋಟುಗಳನ್ನು ಪೋಲೀಸರು ವಶಪಡಿಸಿಕೊಂಡಿರುವರು

ಬೆಂಗಳೂರಿನ ಕಾರ್ಪೊರೇಷನ್ ಸದಸ್ಯರ ಹೆಸರಿನ ಜೊತೆ ಬಿರುದುಗಳನ್ನು ಸೇರಿಸಲು ಅನುಕಾಶವಿಲ್ಲವೆಂದು ಬೆಂಗಳೂರು ಸಮಾಜವಾದಿ ಪಕ್ಷದ ಸದಸ್ಯ ಡಾ|| ಶ್ರೀ ಕಂಠೇಶ್ವರ್ ಸಭೆಯಲ್ಲಿ ತಿಳಿಸಿದ್ದಾರೆ

ಬೆಂಗಳೂರಿನಿಂದ ಸರ್ಕಾರಿ ಪ್ರಕಟಣೆ ಪ್ರಕಟವಾಗಿ ಸರ್ಕಾರಿ ಮೆಡಿಕಲ್ ಆಫೀಸರ್‌ಗಳು ಎಷ್ಟರ ಮಟ್ಟಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡಬಹುದೆಂಬುದನ್ನು ವಿವರಿಸಿದೆ

ಇದೇ ತಾ|| 19 ರ ಲಾಗಾಯಿತು 25 ರ ವರೆಗೆ ರಾಜಧಾನಿಯ ಶ್ರೀ ನಾಗಲಿಂಗ ಸ್ವಾಮಿ ಮಠದಲ್ಲಿ ಶ್ರೀ ಸದ್ಗುರ್ವಾರಾಧನಾ ಮಹೋತ್ಸವ ನೆರವೇರಿದೆ

ತಮಕೂರು—ಗುಬ್ಬಿ ತಾಲ್ಲೂಕು ಕೊಡಿಯಾಲದಿಂದ ಕಳೆದ ಅಕ್ಟೋಬರ್ ತಿಂಗಳಲ್ಲಿ 3 ಮಂದಿ ಗಾಡಿಗಳಲ್ಲಿ 382 ಸೇರು ರಾಗಿ ಸಾಗಿಸಿದ್ದಕ್ಕೆ ಮ್ಯಾಜಿಸ್ಟ್ರೇಟರು ತಲಾ ರೂ 3 ಜುಲ್ಮಾನೆ ವಿಧಿಸಿದರು; ರಾಗಿ ಸರ್ಕಾರಕ್ಕೆ ಸೇರಿತು

ಭಾರತಕ್ಕೆ ಕೆನಡ ಅಧಿಕ ಗೋಧಿ ಸರಬರಾಜು ಮಾಡಬಹುದೆಂದು ಒಟ್ಟಾವ ವಾರ್ತೆ

ಸಿಟಿ ಮುನಿಸಿಪಲ್ ಕೌನ್ಸಿಲ್

ಮೈ ಸೂ ರು

19—1—1951

ಟೆಂಡರ್ ನೋಟಿಫಿಕೇಷನ್

ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

1951-52 (1-2-1951 ರಿಂದ 31-1-1952 ರವರೆವಿಗೆ) ಸೇ ಸಾಲಿಗೆ ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಸಪ್ಲೈ ಮಾಡಲು ಮೊಹರಾದ (Sealed Tenders with samples) ಟೆಂಡರುಗಳನ್ನು ಸ್ಯಾಂಪಲ್‌ಗಳೊಡನೆ 1951 ನೇ ಇಸವಿ ಜನವರಿ ಮಾಹೆ ತಾರೀಖು 29 ನೇ ಸೋಮವಾರ ಮಧ್ಯಾಹ್ನ 4 ಘಂಟೆವರೆವಿಗೂ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಿಸಿರುವ ಟೆಂಡರ್ ಡಿಪಾಜಿಟ್ಟು ಹಣವನ್ನು ಜಮೂಮಾಡಿ ಮುನಿಸಿಪಲ್ ಖಜಾನೆಯಿಂದ ಪಡೆದ ಸರ್ಟಿಫೈಡ್ ಚಲನ್ ಸಮೇತ ತಮ್ಮ ಟೆಂಡರುಗಳನ್ನು ಕಳುಹಿಸತಕ್ಕದ್ದು.

ಹೆಚ್ಚಿಗೆ ವಿವರಗಳನ್ನು ಆಫೀಸು ವೇಳೆಯಲ್ಲಿ ಪಡೆಯಬಹುದು ಮತ್ತು ನೋಟೀಸು ಬೋರ್ಡಿನಲ್ಲಿಯೂ ತಿಳಿಯಬಹುದು.

— ವಿವರ —

ಜಾಬು	ಡಿಪಾಜಿಟ್
A ಹುರುಳಿ ಮತ್ತು ಉಪ್ಪು	300 ರೂ.
B ಒಣಗಿದ ನೆಲ್ಲು ಹುಲ್ಲು	300 ರೂ.
C ಚರಕೆ ಹಗ್ಗ, ನೂಲಿನ ಹಗ್ಗ ಮತ್ತು ಎರೆ ಎಣ್ಣೆ	150 ರೂ.

(ಸಹಿ) ಸಿ. ನರಸಿಂಹಮೂರ್ತಿ
ಕಮೀಷನರ್
ಸಿಟಿ ಮುನಿಸಿಪಲ್ ಕೌನ್ಸಿಲ್
ಮೈ ಸೂ ರು

ಶತಮಾನೋತ್ಸವ ಸಮಾರಂಭ

ಮೈಸೂರು : ಶ್ರೀಮನ್ಮಹಾರಾಜರವರು ನಿನ್ನೆ ದಿನ ಬೆಳಿಗ್ಗೆ ಮಹಾರಾಜ ಕಾಲೇಜ್‌ನ ಶತಮಾನೋತ್ಸವವನ್ನು ಉದ್ಘಾಟಿಸಿದರು.

ಶ್ರೀಗಂಧದಲ್ಲಿ ಲಿಖಿತವಾಗಿದ್ದ ಸಾವನೀಯಂನ್ನು ಮಾಜಿ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಪ್ರಭುಗಳಿಗೆ ಅರ್ಪಿಸಿದರು.

ಶ್ರೀ ಸರಸ್ವತಿ ವಿಗ್ರಹವನ್ನು ಕಾಲೇಜ್‌ನ ಮುಂಭಾಗದಿಂದ ಹಂತವೇರುವ ಎದುರು ಗೂಡಿನಲ್ಲಿ ಪ್ರಭುಗಳು ಸಂಸ್ಥಾಪಿಸಿದರು.

ಅಶೋಕಸ್ತಂಭವನ್ನು ಪ್ರಭುಗಳು ಪ್ರಕಾಶನಗೊಳಿಸಿದರು.

ಶ್ರೀ ಜಯಚಾಮರಾಜೇಂದ್ರ ಮಹಾರಾಜಾಸ್ ಕಾಲೇಜ್ ಶತಮಾನೋತ್ಸವ ಹಾಲ್‌ನ ಶಂಕುಸ್ಥಾಪನೆಯನ್ನು ಪ್ರಭುಗಳು ನೆರವೇರಿಸಿದರು

ಅದೇ ಸಂಜೆ ಡಾ| ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಹಳೇ ಮತ್ತು ಈಗಿನ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಭಾಷಣ ಮಾಡಿದರು.

ನಿನ್ನೆ ದಿವಸ ಬೆಳಿಗ್ಗೆ ಶ್ರೀಮನ್ಮಹಾರಾಜರು ಕ್ರಾಫರ್ಡ್ ಜುಬ್ಲೀಯಂ ಉದ್ಘಾಟಿಸಿದರು.

ಸಂಜೆ ಸಚಿವ ಶ್ರೀ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಚಿವ ಶ್ರೀ ಸಿದ್ದಯ್ಯನವರು ಸರ್. ವಿಶ್ವೇಶ್ವರಯ್ಯನವರ ಭಾವಚಿತ್ರ ಶ್ರೀ ವಾಡಿಯಾರವರು ಆಚಾರ್ಯ ಹಿರಿಯಣ್ಣರ ಭಾವಚಿತ್ರ ಅನಾವರಣ ಮಾಡಿದರು.

ಉಡ್‌ಲಾಂಡ್ಸ್
ಶ್ರೀ ಸು
ಜಯಪ್ರದ 2 ನೇ ವಾರ
ವೀರ ಬಬ್ರುವಾಹನ
ಶಶಿಕಪೂರ್, ಮೃದುಲ್, ಜಾನಕಿದಾಸ್ ಅಭಿನಯಿಸಿರುವ ಅಮೋಘ ಹಿಂದಿ ಚಿತ್ರ

ಅಪೇರಾ 18—1—51 ರಿಂದ
ಪ್ರಕಾಶ್, ಗುಲ್ಜಾರ್, ಬಚ್ಚೊ, ಶಿರಾಜ್, ಮನ್ಸೂರ್, ಇಂದ್ರಬಾಲಾ
ಪಾತ್ರವಹಿಸಿರುವ ಸೊಗಸಾದ ಹಿಂದಿ ಚಿತ್ರ
ಫ್ಲೈಯಿಂಗ್ ಎಕ್ಸ್‌ಪ್ರೆಸ್

ರಣಜಿತ್ ಯಶಸ್ವಿ 2 ನೇ ವಾರ
Nirala ನಿರಾಲ
ಪಾತ್ರ— ಮಧುಬಾಲಾ, ದೇವಾನಂದ, ಯಾಕೂಬ್, ಮುಜರ್ ಖಾನ್
ಈ ಚಿತ್ರಗಳಲ್ಲಿ ಕಾಣದಿರುವ ಅನೇಕ ಸನ್ನಿವೇಶಗಳು ಈ ಹಿಂದಿ ಚಿತ್ರದಲ್ಲಿದೆ

ಸಂಪುಟ ೯ ಸಂಚಿಕೆ ೧೯ ॥ಶ್ರೀ॥ ತಾ॥ 22-1-1951

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃತ್ತಿವಾಸಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾತ್ತಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

.... ಸದ್ಗುರು ವಾಣಿ ....

(ಪ್ರೇಷಕ— 'ಗುರುಭಕ್ತ')

4. ಹುಚ್ಚ'ರು ಯಾರು, ಸಂಸಾರಿಗಳೇ ಸತ್ಸಂಗಿಗಳೇ?

ಶಿಷ್ಯ—ಗುರುದೇವಾ! ಸಂಸಾರೀ ಮನುಷ್ಯರು ಸತ್ಸಂಗೀ ಜನರನ್ನು ಹುಚ್ಚರೆಂದೇಕೆ ಹೇಳುತ್ತಾರೆ?

ಗುರು—ವತ್ಸಾ! ಸಂಸಾರಿಗಳು ಸ್ವಯಂ ಹುಚ್ಚರು, ಅದ್ದರಿಂದ ಇತರರನ್ನೂ ಹುಚ್ಚರೆಂದು ತಿಳಿಯುತ್ತಾರೆ ಇದಕ್ಕೊಂದು ದೃಷ್ಟಾಂತವನ್ನು ಕೇಳು.

ಒಂದು ದೊಡ್ಡ ಪಟ್ಟಣದಲ್ಲಿ ದೊಡ್ಡದೊಂದು ಹುಚ್ಚಾಸ್ಪತ್ರೆಯಿದ್ದಿತು ದೈವಯೋಗದಿಂದ ಅದಕ್ಕೊಂದು ದಿನ ಭಯಾನಕವಾಗಿ ಬೆಂಕಿ ಹತ್ತಿತು ಸುತ್ತಲಿಂದಲೂ ಅಗ್ನಿಜ್ವಾಲೆಯು ಹೊಂಬೇಳ ಹತ್ತಿತು. ಇದನ್ನು ನೋಡಿ ನಗರದ ಅನೇಕ ಜನರು ಸೇರಿದರು, ಫಾಯರ್ ಬ್ರಿಗೇಡಿನ (ಅಗ್ನಿ ಸೇನೆಯ) ಅಫೀಸಿಗೆ ಸುದ್ದಿ ಕೊಡಲಾಯಿತು ಅವರು ಬಂದು ಅಗ್ನಿಯನ್ನು ಶಾಂತಗೊಳಿಸಲು ಪ್ರಯತ್ನಿಸತೊಡಗಿದರು ಈ ವೇಳೆಯಲ್ಲಿ ಮನೆಯ ಮಹಡಿಯ ಮೇಲೆ ಹುಚ್ಚರೆಲ್ಲರೂ ಕೂಡಿಕೊಂಡು ಗಟ್ಟಿಯಾಗಿ ಕಾಣಿಯಲಿಕ್ಕೂ ಹಾಡಲಿಕ್ಕೂ ನಗಲಿಕ್ಕೂ ಮೊದಲಿಟ್ಟರು. ಎಲ್ಲರೂ ಅತ್ಯಂತ ಆನಂದದಲ್ಲಿ ಮಗ್ನರಾಗಿಬಿಟ್ಟರು. ಇದನ್ನು ನೋಡಿ ಕೆಳಗಿನ ಜನರು, ಆ ಹುಚ್ಚರನ್ನು ಕೂಗಿ—'ಎಲೆ ಅಣ್ಣಂದಿರೇ! ನೀವುಗಳು ಬೇಗ ಕೆಳಗೆ ಇಳಿದು ಬನ್ನಿರಿ, ಇಲ್ಲದಿದ್ದರೆ ಬೆಂಕಿಯಲ್ಲಿ ಸುಟ್ಟು ಹೋಗುವಿರಿ ನಿಮ್ಮ ಮನೆಗೆ ಬೆಂಕಿ ತಗುಲಿದೆ, ಬೇಗ ಕೆಳಗೆ ಇಳಿದು ಬನ್ನಿರಿ' ಎಂದು ಹೇಳಿದರು. ಇದನ್ನು ಕೇಳಿ ಹುಚ್ಚರು—"ಅರೆ ಹೋಗು! ಹೋಗು! ಇಲ್ಲಿಂದ ದೂರ ಓಡಿಹೋಗು. ಎಲ್ಲಿಂದ ಮೂರ್ಖರೆಲ್ಲ ಒಟ್ಟಾದಿರಿ ನಮ್ಮನ್ನು ಮೋಸ ಮಾಯಿಸುತ್ತಿರುವಿರಿ ಅದರೆ ನಾವು ನಿಮ್ಮ ಯಾವ ಮಾತನ್ನೂ ಕೇಳಲಾರೆವು ನಮ್ಮ ಮನೆಯಲ್ಲಿ ಯಾವ ದಿನವೂ ಒಂದು ದೀಪ ಕೂಡ ಉರಿಯುತ್ತಿರಲಿಲ್ಲ. ಇಂದು ನಮ್ಮ ಮನೆಯಲ್ಲಿ ದೀಪವಳಿಗೆ, ಸುತ್ತಲೂ ದೀಪಮಾಲೆ ಉರಿಯುತ್ತಿದೆ ಇಂತಹ ಸಮಯದಲ್ಲಿ ಇವರು ಕೆಳಗಿಳಿಯಿರಿ, ಕೆಳಗಿಳಿಯಿರಿ ಎನ್ನುತ್ತಿರುವರು. ಇವರ ಮಾತನ್ನು ಕೇಳಲಿಕ್ಕೆ ನಾವೇನೂ ಇವರಂತೆ ಹುಚ್ಚರಲ್ಲ' ಎಂದು ನುಡಿದು ಮತ್ತೂ ಜೋರಾಗಿ ಹಾಡಲಿಕ್ಕೂ ತೋಳು ತಟ್ಟಿ ತಟ್ಟಿ ಹಾಡಲಿಕ್ಕೂ ತೊಡಗಿದರು. ಜನರು ಎಷ್ಟು ಬುದ್ಧಿ ಹೇಳಿದರೂ ಅವರು ಒಂದನ್ನೂ ಕೇಳಲಿಲ್ಲ ನೋಡ ನೋಡುವಷ್ಟರಲ್ಲಿ ಅಗ್ನಿಯು ವೇಗದಿಂದ ಮನೆಯ ನಾಲ್ಕು ಕಡೆಯನ್ನೂ ಆವರಿಸಿಕೊಂಡಿತು. ಮೂರು ನಾಲ್ಕು ಮನುಷ್ಯರು ಸ್ವಲ್ಪ ಕಡಿಮೆ ಹುಚ್ಚರಾದ್ದರಿಂದ ಹೇಗೋ ಜನರ ಮಾತನ್ನು ಮನ್ನಿಸಿ ಕೆಳಗಿಳಿದು ಬಂದು ಜೀವವನ್ನುಳಿಸಿಕೊಂಡರು ಉಳಿದವರೆಲ್ಲರೂ ಭಸ್ಮವಾದರು

ವತ್ಸಾ! ಸಂಸಾರವೆಂಬ ಗೃಹವೂ ಕೂಡ ಇದೇ ರೀತಿಯಲ್ಲಿ ಮಾಯೆಯೆಂಬ ಧಗಧಗಿಸುವ ಅಗ್ನಿಯಿಂದ ಭಸ್ಮೀಭೂತವಾಗುತ್ತಿದೆ ಇದನ್ನು ಕಂಡು ಸಾಧು ಸಂತ ಮಹಾತ್ಮರುಗಳು ಸಂಸಾರಿ ಜನರನ್ನು ಬಾರಿ ಬಾರಿ ಕರೆಯುತ್ತಾರೆ—"ಸೋದರರೆ! ನಿಮ್ಮ ಮನೆಗೆ ಬೆಂಕಿ ಬಿದ್ದಿದೆ. ಈ ಮಾಯಾಮೋಹೀ ಅಗ್ನಿಯು ಸಾಮಿರಾರು ಪ್ರಯತ್ನವಮಾಡಿದರೂ ಶಾಂತವಾಗುವಂತಹುದಲ್ಲ. ಬೇಗ ನೀವೀ ಮನೆಯನ್ನು ಬಿಟ್ಟು ಬಂದು ಸತ್ಸಂಗದ ಬಯಲಿಗಿಳಿದು ಬನ್ನಿರಿ, ಆಗಲೇ ನಿಮ್ಮ ರಕ್ಷಣೆಯಾದೀತು" ಎಂದು ಹೇಳುತ್ತಿರುವರು ಆದರೆ ಇದನ್ನು ಕೇಳುವವರು ಯಾರು? ಸಂಸಾರೀ ಜನರು ಇದಕ್ಕೆ ವಿಪರೀತವಾಗಿ ಅರ್ಥ ಮಾಡುತ್ತಾರೆ. ಅವರು ಹೇಳುವುದೇನೆಂದರೆ—ಇಂದು ನಮ್ಮ ಒಳ ಹಣವು ಬಂದಿರುವಾಗ, ನಮ್ಮ ಹತ್ತಿರ ಬಂಡಿ, ಕುದುರೆಗಳಿರುವಾಗ, ನಮ್ಮ ಅಂಗಡಿ, ಉದ್ಯೋಗ ವ್ಯಾಪಾರಗಳು ಜೋರಾಗಿ ಸಾಗುತ್ತಿರುವಾಗ, ನಮ್ಮ ಹೆಸರೂ ಕಾರ್ಯವೂ ತುಂಬ ಪ್ರಸಿದ್ಧವಾಗುತ್ತಿರುವಾಗ, ಸರಕಾರವೂ ದೊಡ್ಡ ದೊಡ್ಡ ಪದವಿಯನ್ನು ಕೊಡುತ್ತಿರುವಾಗ ಮತ್ತು ನಾಟಕ, ಸಿನೆಮಾ, ನಾಟ್ಯ, ಗಾನ ಮುಂತಾದ ವುಗಳನ್ನು ನೋಡುವ ಕಾಲವು ಒದಗಿರುವಾಗ ಇಂತಹ ಆನಂದ ದಿನಗಳಲ್ಲಿ, ಓ ಭಿಕ್ಷುಕರೇ! ಓ ಮೂರ್ಖರೇ! ಬನ್ನಿ, ಬನ್ನಿ ಸತ್ಸಂಗ ಮಾಡಿರೆಂದು ನೀವಿದೇನು ಹೇಳುತ್ತಿರುವಿರಿ? ನಾವು ಇಂತಹ ಸುಖವನ್ನು ಬಿಟ್ಟು ನಿಮ್ಮ ಸತ್ಸಂಗಕ್ಕೆ ಬಂದು ಮಾನ ಮರ್ಯಾದೆಗಳಿಗೆ ಕುಂದು ತಂದುಕೊಳ್ಳಲೆ? ಇಂತಹ ಐಶ್ವರ್ಯವನ್ನು ತೊರೆದು ಬೈರಾಗಿಗಳಾಗುವುದೆ? ಇಂತಹ ಹೆಂಡತಿ ಮಕ್ಕಳು—ಸಂಸಾರವನ್ನು ತ್ಯಜಿಸಿ ಯಾರು ಸನ್ಯಾಸಿಯಾಗಲು ಬಯಸಿಯಾರು? ಹಾಗೆ ಬಯಸುವವರು ಸಂಪೂರ್ಣ ಹುಚ್ಚರು. ನೀವು ಹುಚ್ಚರು, ಅದ್ದರಿಂದ ನಮ್ಮನ್ನು ಹುಚ್ಚರನ್ನಾಗಿ ಮಾಡಬಯಸುತ್ತೀರಿ. ಅದರೆ ನೆನಪಿಟ್ಟುಕೊಳ್ಳಿರಿ, ನಾವು ಈ ರೀತಿ ಹುಚ್ಚರಾಗಲಿಚ್ಛಿಸವುದಿಲ್ಲ. ಇಂತಹ ಸತ್ಸಂಗ ಮಾಡಿ ಇದ್ದದೆಲ್ಲವನ್ನೂ ಕಳೆದುಕೊಳ್ಳಲಿಕ್ಕಿಷವುದಿಲ್ಲ" ಇತ್ಯಾದಿ ಇತ್ಯಾದಿ

ವತ್ಸಾ! ಈಗ ಹುಚ್ಚರಾರೆಂದು ನೀನೇ ವಿಚಾರ ಮಾಡು, ಅ ಮಾಯಾ ಮುಗ್ಧರಾದ ಸಂಸಾರೀ ಜೀವರು ಹುಚ್ಚರೆ ಅಥವಾ ಸತ್ಸಂಗೀ ಮಹಾತ್ಮರುಗಳು ಹುಚ್ಚರೆ?

---

5. "ಮನುಷ್ಯ ದೇಹವು ಸ್ಪರ್ಶಮಣಿ"

ಶಿಷ್ಯ—ಗುರುದೇವಾ! ಮನುಷ್ಯ ಜನ್ಮಕ್ಕೆ ಸಾರ್ಥಕತೆಯೇನು?

ಗುರು—'ಜನ್ತೂನಾಂ ನರಜನ್ಮ ದುರ್ಲಭಂ' ಸಮಸ್ತ ಪ್ರಾಣಿಗಳಲ್ಲಿ ಮಾನವ ಜನ್ಮವು ಅತ್ಯಂತ ದುರ್ಲಭವಾದದು. ಈ ಮನುಷ್ಯ ಜನ್ಮವನ್ನು ಗಳಿಸಿಕೊಂಡು ಇದನ್ನು ಸದ್ವ್ಯವಹಾರಗೊಳಿಸುವುದ, ಮನುಷ್ಯ ಜನ್ಮಕ್ಕೆ ಸಾಫಲ್ಯ. ಯಾರು ಇದನ್ನು ಮಾಡುವುದಿಲ್ಲವೊ ಅವರು ಈ ಸ್ಪರ್ಶಮಣಿಗೆ ಮನುಷ್ಯ ಜನ್ಮವನ್ನು ವ್ಯರ್ಥ ಹಾಳು ಮಾಡಿಕೊಂಡಂತೆ ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಕೇಳು.

ಒಬ್ಬ ಅರ್ಥಾರ್ಥೀ ಭಕ್ತನು ಭಗವಂತನ ಹತ್ತಿರ ಧನಕ್ಕಾಗಿ ಬಹಳ ಪ್ರಾರ್ಥನೆ ಮಾಡುತ್ತಿದ್ದನು. ಒಮ್ಮೆ ಒಬ್ಬ ಮಹಾತ್ಮರು ಅವನ ಬಳಿಗೆ ಬಂದರು. ಮಹಾತ್ಮರನ್ನು ನೋಡಿ ಆ ಅರ್ಥಾರ್ಥಿ ಭಕ್ತನು ಬಹಳ ಸಂತೋಷಗೊಂಡು ಅವರ ಪಾದಸೇವೆ ಮಾಡತೊಡಗಿದನು. ಮಹಾತ್ಮರು ಆ ಭಕ್ತನ ಹತ್ತಿರ ಅವನ ವೃತ್ತಾಂತವನ್ನು ಪ್ರಶ್ನಿಸಿದರು. ಭಕ್ತನೂ ತನ್ನ ದಾರಿದ್ರ್ಯದ ಎಲ್ಲಾ ವೃತ್ತಾಂತವನ್ನೂ ಹೇಳಿಕೊಂಡನು. ದಯಾಳುವಾದ ಮಹಾತ್ಮರ ಹೃದಯವು ದ್ರವಿತವಾಗಿ ಅವರು ಜೋಳಿಗೆಯಿಂದ ಕಲ್ಲಿನಂತಹ ಒಂದು ವಸ್ತುವನ್ನು ಆ ಮನುಷ್ಯನ ಕೈಯಲ್ಲಿ ಕೊಟ್ಟು—'ಇದು ಸ್ಪರ್ಶಮಣಿ, ಇದರ ಗುಣವೇನೆಂದರೆ ಇದಕ್ಕೆ ಕಬ್ಬಿಣವನ್ನು ಮುಟ್ಟಿಸುವುದರಿಂದ ಚೆನ್ನವಾಗಿ ಬಿಡುತ್ತದೆ ನಿನಗೆ ನಾವು ಏಳು ದಿನದ ಸಮಯವನ್ನು ಕೊಡುತ್ತೇವೆ, ಏಳು ದಿನಗಳೊಳಗಾಗಿ ಇದರ ಮೂಲಕ ಎಷ್ಟು ಸಾಧ್ಯವೋ, ಅಷ್ಟು ಕಬ್ಬಿಣವನ್ನು ಸುವರ್ಣ ಮಾಡಿಕೊ. ಆದರೆ ನೆನಪಿಟ್ಟುಕೊ, ಇಂದಿಗೆ ಏಳನೇ ದಿವಸದ ಸಂಧ್ಯಾ ಸಮಯದಲ್ಲಿ ಈ ಸ್ಪರ್ಶಮಣಿಯನ್ನು ಅವಶ್ಯವಾಗಿ ಹಿಂದಕ್ಕೆ ಕೊಡಬೇಕಾಗುವುದ. ಅದಂಬ್ಲೇನೂ ಅಡ್ಡಿ ಹೇಳುವುದರಿಂದ ನತೆಯಲಾಗದು' ಎಂದು ಆದೇಶವಿತ್ತರು. ಸಶೇಷ

Edited, Printed and Published by M. S. Krishna Rao, at the Satyavadi Press Chamrajpuram Mysore